ಶ್ರೀ ಎಸ್ ಆರ್. ಬೊಮ್ಮಾಯಿ —ಯಾವಾಗ ಫಾರೆಸ್ಟ್ ಇಲಾಖೆಗೆ ಹೋಗಿದೆ ಎನ್ನುವುದನ್ನು ಪ್ರತಿಯೊಂದು ಗ್ರಾಮದಲ್ಲೂ ನೋಡಿದಾಗ ಗೊತ್ತಾಗುತ್ತದೆ. ಸದ್ಯಕ್ಕೆ ಇದರ ವಿವರಗಳು ಇಲ್ಲ. ಅತಿಕ್ರಮಣ ಮಾಡಿದಂಥ ಜಮೀನುಗಳನ್ನು ರೆಗ್ಯುಲರೈಸ್ ಮಾಡುವುದರ ಬಗ್ಗೆ ಸರ್ಕಾರ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು —ಶ್ರೀ ಆರ್. ವೆಂಕಟರಾವಾಯ್ಯ : ಗೈರು ಹಾಜರಿ
ಶ್ರೀ ಬಿ. ಐ. ಪಾಟೀಲ್ : ಗೈರು ಹಾಜರಿ
ಶ್ರೀ ಬಸವರಾಜ ಪಾಟೀಲ್ : ಗೈರು ಹಾಜರಿ

ಮುಂದೂಡಲಾದ ಪ್ರಶ್ನೆ ಸಂಖ್ಯೆ : ೨೭೫ (೪೧೬)

ವಾಣಿವಿಲಾಸ ಸಕ್ಕರೆ ಕಾರ್ಖಾನೆಯಲ್ಲಿ ನಷ್ಟ

೪೧೬(೫) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕಿನಲ್ಲಿ ವಾಣೀವಿಲಾಸ ಸಹಕಾರ ಸಕ್ಕರೆ ಕಾರ್ಖಾನೆಯು ರೈತರ ಷೇರು ಬಂಡವಾಳದೊಡನೆ ಸ್ಥಾಪನೆಯಾಗಿದ್ದು ಈಗ ೫–೬ ಕೋಟಿ ರೂ.ಗಳಷ್ಟು ನಷ್ಟದಲ್ಲಿರುವುದು ಮತ್ತು ಈಗಾಗಲೇ ಕಾರ್ಖಾನೆಯ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಈ ಸಕ್ಕರೆ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಕಾರ್ಮಿಕರನ್ನು ತೆಗೆದು ಹಾಕಿದ್ದರಿಂದ ನೌಕರರು ಬೀದಿ ಪಾಲಾಗಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ನೌಕರರ ಜೀವನೋಪಾಯಕ್ಕೆ ಸರ್ಕಾರದವರು ಯಾವ ಕ್ರಮ ತೆಗೆದು ಕೊಂಡಿದ್ದಾರೆ ?

ಈ) ವಾಣಿ ವಿಲಾಸ ಸಕ್ಕರೆ ಕಾರ್ಖಾನೆಯು ನಷ್ಟದಲ್ಲಿರಲು ಕಾರಣವೇನು ?

ಉ) ಹಾಗಿದ್ದಲ್ಲಿ ಕಾರ್ಖಾನೆಯು ಲಾಭದಾಯಕವಾಗಿ ನಡೆಯುವಂತಾಗಲು ಕೈಕೊಂಡ ಕ್ರಮ ವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು)

ಅ) ಹೌದು

ಸಾಕಷ್ಟು ಕಬ್ಬು ದೊರೆಯದಿದ್ದರಿಂದ ಕಾರ್ಖಾನೆಯು ಕಬ್ಬು ಅರೆಯುವ ಕಾರ್ಯಾಚರಣೆಯನ್ನು ನಿಲ್ಲಿಸಿದೆ. ಈ ಕಾರ್ಖಾನೆಯ ಲೆಕ್ಕಪತ್ರಗಳು ೧೯೮೩–೮೪ರ ವರೆಗೆ ತಪಾಸಣೆಯಾಗಿದ್ದು ಇದು ಒಟ್ಟು ೪.೪೮ ಕೋಟಿ ರೂ.ಗಳಷ್ಟು ನಷ್ಟದಲ್ಲಿರುತ್ತದೆ.

ಆ) ಈ ಕಾರ್ಖಾನೆಗೆ ಮುಖ್ಯವಾಗಿ ವಾಣೀವಿಲಾಸ ಸಾಗರದ ಅಚ್ಚುಕಟ್ಟಿನಲ್ಲಿ ಬೆಳೆಯುವ ಕಬ್ಬನ್ನು ಸರಬರಾಜು ಮಾಡಲಾಗುತ್ತಿತ್ತು. ಆದರೆ ಕಳೆದ ೩–೪ ವರ್ಷಗಳಿಂದ ಮಳೆಯ ಅಭಾವದಿಂದ ವಾಣೀವಿಲಾಸ ಸಾಗರಕ್ಕೆ ನೀರು ಬರದಿದ್ದುದರಿಂದ ಈ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲು ಸಾಧ್ಯವಾಗಲಿಲ್ಲ. ಇದರಿಂದ ಕಾರ್ಖಾನೆಗೆ ಸಾಕಷ್ಟು ಕಬ್ಬು ದೊರೆಯದ ಪ್ರಯುಕ್ತ ಬೇರೆ ದಾರಿಯಿಲ್ಲದೆ ಈ ಕಾರ್ಖಾನೆಯ ಕೆಲಸಗಾರರನ್ನು ೩–೪–೧೯೮೫ ರಿಂದ ''ಲೇ ಆಫ್'' ಮಾಡಲಾಯಿತು.

ಇ) ಸಕ್ಕರೆ ಉದ್ಯಮವು ''ಸೀಜನಲ್'' ಉದ್ಯಮವೆಂಬ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದೆ. ಆದುದರಿಂದ ಕಾರ್ಖಾನೆಯು ಲೇ ಆಫ್ ಮಾಡಲಾಗಿರುವ ಕಾರ್ಮಿಕರಿಗೆ ಯಾವ ರೀತಿಯ ಪರಿಹಾರವನ್ನು ಕೊಡುವ ಹೊಣೆಗಾರಿಕೆ ಇರುವುದಿಲ್ಲ. ಲೇ ಆಫ್ ಮಾಡಲಾಗುವ ಎಲ್ಲಾ ಕಾರ್ಮಿಕರಿಗೆ ಪರಿಹಾರವನ್ನು ಕೊಡಲು ಸರ್ಕಾರದಿಂದ ಧನ ಸಹಾಯವನ್ನು ಕೊಡಲು ಸಾಧ್ಯವಾಗುವುದಿಲ್ಲ.

ಈ) ಈ ಕಾರ್ಖಾನೆಯು ಅನುಭವಿಸಿರುವ ನಷ್ಟಕ್ಕೆ ಕಾರಣಗಳು.

೧. ಈ ಕಾರ್ಖಾನೆಗೆ ತನ್ನ ಕಬ್ಬು ಅರೆಯುವ ಸಾಮರ್ಥ್ಯದಷ್ಟು ಕಬ್ಬು ದೊರಕದೇ ಇರುವುದು.

೨. ಕಾರ್ಖಾನೆಯು ಹೆಚ್ಚು ಕಬ್ಬನ್ನು ಬೆಳೆಸಲು ಸಾಕಷ್ಟು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

೩. ಈ ಕಾರ್ಖಾನೆಗೆ ಬಹುತೇಕ ಕಬ್ಬನ್ನು ವಾಣೀವಿಲಾಸ ಸಾಗರದ ಅಚ್ಚುಕಟ್ಟು ಪ್ರದೇಶದಿಂದ ಸರಬರಾಜು ಮಾಡಲಾಗುತ್ತಿತ್ತು. ಈ ಪ್ರದೇಶದಲ್ಲಿ ಬೆಳೆಯಲಾಗುವ ಕಬ್ಬು ವಾಣಿವಿಲಾಸ ಸಾಗರದಿಂದ ದೊರೆಯುವ ನೀರನ್ನು ಅವಲಂಭಿಸಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಮಳೆಯು ಬಾರದಿದ್ದುದರಿಂದ ವಾಣೀವಿಲಾಸ ಸಾಗರಕ್ಕೆ ನೀರು ಬಾರದೆ ಕಾರ್ಖಾನೆಗೆ ಸಾಕಷ್ಟು ಕಬ್ಬು ದೊರಕಿರುವುದಿಲ್ಲ.

೪. ಕಾರ್ಖಾನೆಗೆ ಸಕ್ಕರೆ ಮಾರಾಟದಿಂದ ಬಂದ ಸರಾಸರಿ ಬೆಲೆ ಸಕ್ಕರೆ ಉತ್ಪಾದನಾ ವೆಚ್ಚಕ್ಕಿಂತ ಅತಿ ಕಡಿಮೆಯಾಗಿರುತ್ತದೆ.

೫. ಭಾರತ ಸರ್ಕಾರವು ನಿಗದಿಪಡಿಸಿರುವ ಕಬ್ಬಿನ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕಾರ್ಖಾನೆಯು ಕಬ್ಬಿನ ಬೆಳೆಗಾರರಿಗೆ ಕೊಟ್ಟಿರುತ್ತದೆ.

೬) ವಾಣಿ ವಿಲಾಸ ಸಾಗರದಲ್ಲಿ ನೀರಿಲ್ಲದಿದ್ದರಿಂದ ಕಾರ್ಖಾನೆಗೆ ಸಾಕಾಗುವಷ್ಟು ಕಬ್ಬನ್ನು ಬೆಳೆಯಲು ಸಾಧ್ಯವಾಗದಿದ್ದ ಕಾರಣ. ಕಾರ್ಖಾನೆಯು ೧೯೮೩-೮೪ರಲ್ಲಿ ಬಾವಿಗಳ ಮೂಲಕ ಕಬ್ಬಿನ ವ್ಯವಸಾಯಕ್ಕೆ ಪ್ರೋತ್ಸಾಹ ನೀಡಲು ಒಂದು ನೀರಾವರಿ ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯಗತ ಮಾಡಲು ಕ್ರಮ ಕೈಗೊಂಡಿದೆ ಈ ಯೋಜನೆಯ ಪ್ರಕಾರ ೧೩೦ ಕೊಳವೆ ಬಾವಿಗಳನ್ನು ೫೦೦ ತೋಡು ಬಾವಿಗಳನ್ನು ೭೦೦ ತೋಡು ಬಾವಿಗಳ ತಳದಿಂದ ಕೊಳವೆ ಬಾವಿಗಳನ್ನು ಮತ್ತು ೧೦೦ ನೀರಾವರಿ ಪಂಪುಸೆಟ್ಟುಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ೯.೫೦ ರೂ.ಗಳಾಗಿದ್ದು ಇದನ್ನು ೩ ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ (ಆ) ಪ್ರಶ್ನೆಗೆ ಮಾನ್ಯ ಸಚಿವರು ೧೯೮೩-೮೪ರ ವರೆಗೆ ತಪಾಸಣೆಯಾಗಿದ್ದು ಆಡಿಟ್ ವರದಿಯಂತೆ ಒಟ್ಟು ೪.೪೮ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಹೇಳಿದ್ದಾರೆ. ರೈತರು ಕಾರ್ಖಾನೆಗೆ ಶೇರನ್ನು ಕಟ್ಟಬೇಕಾದರೆ ಆವರು ಆಸ್ತಿಯನ್ನು ಬ್ಯಾಂಕಿಗೆ ಆಧಾರ ಮಾಡಿ ಸಾಲವನ್ನು ತೆಗೆದುಕೊಂಡು ಕೊಟ್ಟಿದ್ದಾರೆ.ಸುಮಾರು ೧೬೦೦ ರಿಂದ ಮೂರು ಸಾವಿರ ಶೇರುಗಳಷ್ಟು ಕೊಟ್ಟಿದ್ದಾರೆ. ರೈತರು ಅಷ್ಟು ಕಷ್ಟಪಟ್ಟು ಆಸ್ತಿಯನ್ನು ಆಧಾರ ಮಾಡಿ ಶೇರುಗಳನ್ನು ಕೊಟ್ಟಿರತಕ್ಕಂಥ ಕಾರ್ಖಾನೆ ಅಷ್ಟು ನಷ್ಟವನ್ನು ಅನುಭವಿಸುತ್ತಿದೆ ಎನ್ನುವುದು ಗಮನದಲ್ಲಿದ್ದಾಗೂ ಆಡಳಿತ ವ್ಯವಸ್ಥೆಯಲ್ಲಿ ಏನು ವ್ಯವಸ್ಥೆ ಇದೆ ಎನ್ನುವುದನ್ನು ಮಾನ್ಯ ಸಚಿವರು ಮನಗಂಡು ಅಲ್ಲಿರತಕ್ಕಂಥ ಕಮಿಟಿಯಂನ್ನು ವರ್ಗಾಯಿಸಿದರೆ ಈ ನಷ್ಟವನ್ನು ತಪ್ಪಿಸಬಹುದಾಗಿತ್ತು. ವಾಣಿವಿಲಾಸ ಸಾಗರದಲ್ಲಿ ಸರಿಯಾಗಿ ಮೂರು ನಾಲ್ಕು ವರ್ಷಗಳಿಂದ ನೀರು ಇಲ್ಲ. ಕಬ್ಬು ಬೆಳೆಯುವುದಕ್ಕೆ ಆಗುತ್ತಿಲ್ಲ. ಅಲ್ಲಿರತಕ್ಕ ಕೆಲಸಗಾರರನ್ನು ಇದು ಸೀಸನಲ್ ಲೇಆಫ್ ಮಾಡಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇತ್ತ ಸರ್ಕಾರ ಮಾನವೀಯ ದೃಷ್ಟಿಯಿಂದ ಅಗತ್ಯ ಸೇವೆಗಳಿಗೋಸ್ಕರ ವಿಧವೆಯವರಿಗೆ ವೇತನವನ್ನು ಕೊಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿರತಕ್ಕ ಸರ್ಕಾರ ಕಾರ್ಮಿಕರು ಬೀದಿಯಲ್ಲಿ ನಿಂತಿರುವಾಗ ಅವರಿಗೆ ಕೊಡುವುದಕ್ಕೆ ಶಕ್ಯವಿಲ್ಲ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಈ ಕಾರ್ಖಾನೆಯಲ್ಲಿರತಕ್ಕ ಸುಮಾರು ಆರವತ್ತೈದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಸ್ಪೇರ್ ಪಾರ್ಟ್ಸ್‌ನ್ನು ಇಟ್ಟಿದ್ದಾರೆ. ಆ ಸ್ಪೇರ್ ಪಾರ್ಟ್ಸ್‌ಗಳನ್ನು ಮಾರಿಯಾದರೂ ಕೂಡ ಕಾರ್ಮಿಕರಿಗೆ ಸಂಬಳವನ್ನು ಕೊಡಿಸಬೇಕು ಎಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ತದನಂತರ ಭಾರತಸರ್ಕಾರವು ನಿಗಧಿಪಡಿಸಿರುವ ಕಬ್ಬಿನ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕಬ್ಬಿನ ಬೆಳೆಗಾರರಿಗೆ ಕೊಟ್ಟಿರುತ್ತೇವೆ ಎಂದು ಹೇಳಿದ್ದಾರೆ. ಆವರು ಉತ್ಪನ್ನದಲ್ಲಿ ಕೊಟ್ಟಿದ್ದಾರೆಯೇ ಹೊರತು ಬೇರೆ ರೀತಿಯಲ್ಲಿ ಕೊಟ್ಟಿಲ್ಲ. ಆದ್ದರಿಂದ ಇದು ಸರಿಯಾದ ಕಾರಣವಲ್ಲ. ವಾಣಿವಿಲಾಸ ಸಾಗರದಲ್ಲಿ ಸಾಕಷ್ಟು ನೀರು ಇಲ್ಲದೇ ಇರುವುದರಿಂದ ಕೊಳವೆ ಬಾವಿಗಳನ್ನು ತೊಡಿಸಬೇಕು. ವಾಣಿವಿಲಾಸ ಸಾಗರದಲ್ಲಿ ನೀರು ಇಲ್ಲ, ಆದುದರಿಂದ ತೋಡು ಬಾವಿಗಳನ್ನು, ಕೊಳವೆ ಬಾವಿಗಳನ್ನು ತೋಡಿಸುತ್ತಿದ್ದಾರೆ. ಆದರೆ ಆ ಕೊಳವೆಬಾವಿಗಳಲ್ಲಿಯೂ ಕೂಡ ನೀರು ಸಾಕಾಗುತ್ತಿಲ್ಲ. ಆದ್ದರಿಂದ ಅಲ್ಲಿರತಕ್ಕಂಥ ಕೆರೆಯಲ್ಲಿ ಖಾಯಂ ಆಗಿ ನೀರು ಬರುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಖಾಯಂ ಆಗಿ ಕೆರೆಗೆ ನೀರು ಬರುವ ಹಾಗೆ ಮಾಡಬೇಕು ಎಂದು ಕೇಳಿ

ದ್ದಾರೆ. ಮೋಡದಿಂದ ನೇರವಾಗಿ ಕೆರೆಗೆ ಬೀಳುವ ಹಾಗೇ ಅವರೇ ಹೇಳಿಕೊಟ್ಟರೆ ಆ ರೀತಿ ಮಾಡ ಬಹುದು. ನೇರವಾಗಿ ಕೆರೆಗೆ ನೀರು ಬರುವಂಥ ವ್ಯವಸ್ಥೆ ಇದ್ದರೆ ಆ ರೀತಿ ಮಾಡಬಹುದು. ಆಮೇಲೆ ಕಾರ್ಖಾನೆಯಲ್ಲಿ ೬೫ ಲಕ್ಷ ರೂಪಾಯಿ ಬೆಲೆ ಬಾಳುವಂತಹ ಸ್ಪೇರ್ ಪಾರ್ಟ್ಸ್ ಇದೆ, ಅದನ್ನು ಮಾರಿ ಯಾದರೂ ಕಾರ್ಮಿಕರಿಗೆ ಸಂಬಳವನ್ನು ಕೊಡಿ ಎಂದು ಹೇಳಿದ್ದಾರೆ. ಆ ರೀತಿ ಮಾಡೋಣ, ಆದರೆ ಮುಂದೆ ಏನು ಮಾಡುವುದು ? ಮಾನ್ಯ ಸದಸ್ಯರು ಷೇರ್ ಹೋಲ್ಡರ್ಸ್‌ದು ದಂಡ್ಡಿ ಎಂದು ಹೇಳಿ ದ್ದಾರೆ. ಹೀಗೆ ಮಾಡಿದರೆ ಷೇರ್ ಹೋಲ್ಡರ್ಸ್‌ಗೆ ಮಂಗನಾಮ ಬಿತ್ತು. ಈಗ ಇರುವುದನ್ನು ಮಾರಿ ಬಿಟ್ಟರೆ ಮುಂದೆ ಒಂದೊಂದು ಇಟ್ಟಿಗೆಯನ್ನು ಕಳಚಿಕೊಡಬೇಕಾಗುತ್ತದೆ. ಇದು ಸರಿಯಾದ ಕಾರ್ಯ ಕ್ರಮ ಅಲ್ಲ. ಇದನ್ನೆಲ್ಲಾ ಯೋಚನೆ ಮಾಡಿ ಪರ್ಮನೆಂಟ್ ಆಗಿ ವ್ಯವಸ್ಥೆ ಮಾಡಲು ನಬಾರ್ಡ್ ಮುಂದೆ ಸ್ಕೀಮ್ ಸ್ಯಾಂಕ್ಷನ್ ಮಾಡಿಸಬೇಕೆಂದು ಯೋಚಿಸುತ್ತಿದ್ದೇವೆ. ಅವರೂ ಬಂದರೆ ಸಂತೋಷ. ಈಗಾಗಲೇ ಬಾವಿಗಳನ್ನು ತೋಡುತ್ತಾ ಇದ್ದಾರೆ. ಮೂರು ಸಾವಿರ ಬಾವಿಗಳನ್ನು ತೆಗೆಯಬೇಕೆನ್ನುವುದು ನಮ್ಮ ಉದ್ದೇಶ. ಒಂದೂವರೆ ಲಕ್ಷ ಟನ್ ಕಬ್ಬು ಬಂದರೆ ಫ್ಯಾಕ್ಟರಿಯನ್ನು ನಡೆಸಬಹುದು. ನಂತರ ಕಮಿಟಿಯನ್ನು ತೆಗೆಯಿರಿ ಎಂದು ಹೇಳಿದ್ದಾರೆ. ಕಮಿಟಿಯಂವರ ಮೇಲೆ ಸ್ಪಷ್ಟವಾದ ವಿಶ್ವಾಸ– ಆಪ್ಪೋಪ್ರಿಯೇಷನ್ ಚಾರ್ಜಸ್ ಬಂದರೆ ಅವರನ್ನು ತೆಗೆಯಬಹುದು. ಅದನ್ನು ಈಗಾಗಲೇ ಎನ್ ಕ್ವೈರಿಗೆ ಕಳಂಹಿಸಿದ್ದೇವೆ. ಎನ್‌ಕ್ವೈರಿಯನ್ನು ಮಾಡಿಸೋಣ, ಅವರ ಮೇಲೂ ಛಾರ್ಜಸ್ ಇದ್ದರೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಾರುಕಟ್ಟೆ ಹಾಗೂ ಕೃಷಿ ಇಲಾಖೆಗಳಲ್ಲಿನ ಉದ್ಯೋಗಿಗಳಿಗೆ ಗೊತ್ತುಪಡಿಸಿದ ಅರ್ಹತೆ

೯೧೨. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಮಾರುಕಟ್ಟೆ ಮತ್ತು ಕೃಷಿ ಇಲಾಖೆಯಲ್ಲಿಯ ಹುದ್ದೆಗಳಿಗೆ ಬಿ.ಎಸ್.ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ) ಪದವೀಧರರನ್ನು ನೇಮಿಸಿಕೊಳ್ಳುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ?

(ಆ) ಹಾಗಿಲ್ಲದಿದ್ದಲ್ಲಿ ಈ ವಿಷಯವನ್ನು ಯಾವಾಗ ಪರಿಶೀಲಿಸಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಈಗ ಇಂತಹ ಪದವೀಧರರಂ ಯಾವ ಹುದ್ದೆಗಳಿಗೆ ಎಲ್ಲಾ ವಿಷಯಗಳ ಸಾಮಾನ್ಯ ಪದವಿಯನ್ನು ವಿದ್ಯಾರ್ಹತೆಯನ್ನಾಗಿ ನಿರ್ದಿಷ್ಟಪಡಿಸಲಾಗಿದೆಯೋ ಅಂತಹ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

(ಆ) ತಾಂತ್ರಿಕ ವಿದ್ಯಾರ್ಹತೆಯಾಗಿರುವ ಬಿ. ಎಸ್. ಸಿ. (ಕೃಷಿ) ಪದವೀಧರರನ್ನು ಕೃಷಿ ಇಲಾಖೆಯು ಸಾಮಾನ್ಯವಾಗಿ ನೇಮಿಸಿಕೊಳ್ಳುತ್ತಿದೆ. ಬಿ.ಎಸ್.ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರಿ) ಇದನ್ನು ಬಿ.ಎಸ್.ಸಿ. (ಕೃಷಿ) ಪದವಿಗೆ ಸಮವೆಂದು ಪರಿಗಣಿಸಲಾಗಿಲ್ಲ. ಹೊರಡಿಸಲಾಗುವ ಮಾರುಕಟ್ಟೆ ಇಲಾಖೆಯ ಪದವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬಿ.ಎಸ್.ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರಿ) ಪದವೀಧರರಿಗೆ ಸೂಕ್ತ ಆದ್ಯತೆಯನ್ನು ಕೊಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಬಗರ್ ಹುಕುಂ ಸಾಗುವಳಿದಾರರಿಗೆ ಜಮೀನು ಹಕ್ಕು ನೀಡಿಕೆ ಬಗ್ಗೆ

೯೧೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಬಗರ್ ಹುಕುಂ ಸಾಗುವಳಿದಾರರಿಗೆ ಜಮೀನು ಹಕ್ಕು ನೀಡುವುದಾಗಿ ಸರ್ಕಾರ ಘೋಷಿಸಿದೆಯೇ ?